ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 04.07.2024.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಆರ್.ಜೆ.ಪಿ. ವಕೀಲರಿಂದಃ**

ದಿಃ 01.10.2018 ರಂದು ನ್ಯಾಯಾಲಯದವರು ಸಮನ್ಸ್ ತೆಗೆದುಕೊಂಡು ನಮ್ಮ ಊರಿಗೆ ಬಂದಿದ್ದರು ಎಂದರೆ ಸಾಕ್ಷಿ ನಾನು ಊರಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ಆಗ ನಮ್ಮ ಮನೆಯಲ್ಲಿ ನಾನು ಊರಿಗೆ ಹೋಗಿರುತ್ತೇನೆ ಎಂದು ಹೇಳಿರುತ್ತಾರೆ ಎಂದರೆ ಸರಿ. ನಂತರ ದಿಃ 03.11.2018 ರಂದು ನ್ಯಾಯಾಲಯದ ಸಮನ್ಸ್ ತೆಗೆದುಕೊಂಡು ನ್ಯಾಯಾಲಯದ ಸಿಬ್ಬಂದಿ ಪುನಃ ಬಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ನ್ಯಾಯಾಲಯದ ಪಿಎಸ್ ವರದಿಯ ಮೇಲಿನ ಸಾಕ್ಷಿ ಸಹಿಯನ್ನು ತೋರಿಸಿತಿದ್ದು ಅದು ನನ್ನದು ಅಲ್ಲ ಎಂದು ನುಡಿಯುತ್ತಿದ್ದಾರೆ. ದಿಃ 13.11.2018 ರಂದು ನಾನು ನ್ಯಾಯಾಲಯಕ್ಕೆ ಬಂದು ಸ್ವತಃ ನ್ಯಾಯಾಲಯದ ಆವರಣದಲ್ಲಿ ಸಮನ್ಸ್ ತೆಗೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸಮನ್ಸ್ ತೆಗೆದುಕೊಂಡಿದ್ದರೂ ಕೂಡಾ ಹಾಗೂ ತೆಗೆದುಕೊಂಡಿದ್ದರೂ ಕೂಡಾ ಈಗ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿಃ 03.11.2018 ರಂದು ನಾನು ನ್ಯಾಯಾಲಯಕ್ಕೆ ಬಂದಿರಲಿಲ್ಲ. ಮೂಲ ದಾವೆ ಹಾಕಿದ ಬಗ್ಗೆ ನಮಗೆ ಒಂದು ವರ್ಷದ ನಂತರ ಗೊತ್ತಾಗಿರುತ್ತದೆ. ಅದು ಗೊತ್ತಾಗಿ ಒಂದು ವರ್ಷವಾದ ನಂತರ ವಕೀಲರನ್ನು ನೇಮಿಸಿರುತ್ತೇನೆ. ದಾವಾ ಆಸ್ತಿಯನ್ನು ಅಂತಿಮ ಅರ್ಜಿಯ ಮೇಲೆ ಅಳೆಯಲು ಬಂದಿದ್ದರು ಎಂದರೆ ನಾನು ಅಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ಹೋದ ತಿಂಗಳು ಎದುರುದಾರರು ನ್ಯಾಯಾಲಯದಲ್ಲಿ ಇಪಿ ಅರ್ಜಿ ನಂ.36/2023 ಹಾಕಿ ಕಬ್ಜೆ ಕೂಡಾ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನಂತರ ಸದರಿ ಇಪಿ ದಿಃ 01.07.2024 ರಂದು ಸಂಪೂರ್ಣ ತೃಪ್ತಿಕರವಾಗಿದೆ ಎಂದು ಮುಕ್ತಾಯಗೊಳಿಸಲಾಗಿದೆ ಎಂದರೆ ಸರಿಯಲ್ಲ.

ಮೂಲ ದಾವೆಯಲ್ಲಿ ಆದ ತೀರ್ಪು, ಎಫ್.ಡಿ.ಪಿ ಯಲ್ಲಿ ತೀರ್ಪು ಹಾಗೂ ಇಪಿಯಲ್ಲಿ ಮೇಮೋ ಹಾಕಿದ ಬಗ್ಗೆ ನನಗೆ ಗೊತ್ತಿದ್ದರೂ ಕೂಡಾ ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಹೆಂಡತಿ ಮಕ್ಕಳಿಗೆ ಕೊಡಬಾರದು ಎಂಬ ದುರುದ್ದೇಶ ಹೊಂದಿರುತ್ತೇನೆ ಎಂದರೆ ಸರಿಯಲ್ಲ. ಇಪಿ ಅರ್ಜಿ ಮುಕ್ತಾಯವಾಗಿರುವ ಕಾರಣ ನಾನು ಸಲ್ಲಿಸಿದ ಅರ್ಜಿ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>**ಮರು ವಿಚಾರಣೆಃ** ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)
ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**